2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 111/2017</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಎಸ್.ನಾಗೇಂದ್ರ | | ಪಿಡಬ್ಲೂ - 08 |
| ತಂದೆಯ ಹೆಸರು | - ಶ್ರೀನಿವಾಸಮೂರ್ತಿ | | ಸಿಡಬ್ಲೂ - 09 |
| ವಯಸ್ಸು | - 57 ವರ್ಷ | | |
| ಉದ್ಯೋಗ | - ಎ.ಇ.ಇ, ತುಮಕೂರು ಸಿಟಿ ಕಾರ್ಪೋರೇಶನ್ | | |
| ವಾಸ ಸ್ಥಳ | - ತುಮಕೂರು | | |

ದಿನಾಂಕಃ **19.11.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2008 ನೇ ಸಾಲಿನಿಂದ ಕಡೂರು ಲೋಕೋಪಯೋಗಿ ಕಚೇರಿಯಲ್ಲಿ ಎ.ಇ. ಯಾಗಿ 2022 ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿಃ 12.09.2016 ರಂದು ಪೋಲೀಸ್ ಉಪನಿರೀಕ್ಷಕರು ಕಡೂರು ಠಾಣೆಯವರು ನನಗೆ ಪತ್ರವನ್ನು ಬರೆದು ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರ ರನ್ನು ಕೇಳಿಕೊಂಡಿದ್ದರು. ಸದರಿ ಪತ್ರವನ್ನು ನಿಪಿ.27 ಎಂದು ಗುರುತಿಸಲಾಯಿತು.
3. ನಮ್ಮ ಕಚೇರಿಯ ಎ.ಇ.ಇ. ರವರು ಕೃತ್ಯ ನಡದೆ ಸ್ಥಳಕ್ಕೆ ಬೇಟಿ ನೀಡಿ ನಕ್ಷೆ ತಯಾರಿಸಿಕೊಡುವಂತೆ ನನಗೆಸೂಚನೆ ನೀಡಿದ್ದರು. ನಾನು ದಿಃ 24.12.2016 ರಂದು ಕಡೂರು ಠಾಣೆಯ ಪಿ.ಎಸ್.ಐ ಶ್ರೀ ರಾಕೇಶ್ರವರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ನಕ್ಷೆಯನ್ನು ತಯಾರಿಸಿ ನೀಡಿದ್ದೇನೆ. ಸದರಿ ನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.28 ಎಂದು ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು,

ಕವಚಪತ್ರವನ್ನು ನಿಪಿ.29 ಎಂದು ಗುರುತಿಸಲಾಯಿತು. ಸ್ಥಳದ ವಿವರವನ್ನು ನಿಪಿ.28 ರಲ್ಲಿ ನಮೂದಿಸಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 21.11.2016 ರಂದು ನಾನು ಸ್ಥಳ ಪರಿಶೀಲನೆ ಮಾಡಿ ನಿಪಿ.28 ರ ನಕ್ಷೆ ತಯಾರಿಸಿದ್ದೇನೆ ಎಂದರೆ ನಿಜ.

ಪಾಟೀ ಸವಾಲುಃಶ್ರೀ ಬಿ.ಎಂ.ಎಲ್.ಜೆ., ವಕೀಲರಿಂದ ಆರೋಪಿ ಪರವಾಗಿ

5. ನಿಪಿ.28 ರ ನಕ್ಷೆ ತಯಾರಿಸುವ ಕಾಲಕ್ಕೆ ಸರ್ವೆ ನಂಬರಿನ ಬಾಬ್ತು ದಾಖಲೆ ನನಗೆ ತೋರಿಸಿರಲಿಲ್ಲ. ಜಟ್ಟಿ ಕಾವಲು ಸರ್ವೆ ನಂ.12 ಎಷ್ಟು ವಿಸ್ತೀರ್ಣ ಇದೆ ಮತ್ತು ಅದರ ಚಕ್ಕುಬಂದಿ ಏನು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಯಾರಿಗೆ ಸೇರಿದ್ದು, ಅದರ ಅಕ್ಕಪಕ್ಕದ ಜಮೀನುಗಳು ಯಾರಿಗೆ ಸೇರಿದ್ದು ನನಗೆ ಮಾಹಿತಿ ಇಲ್ಲ. ನಿಪಿ.28 ರ ನಕ್ಷೆ ತಯಾರಿಸುವ ಕಾಲಕ್ಕೆ ಬಾಧಿತರು ಹಾಜರಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಕಚೇರಿಯಲ್ಲಿಯೇ ಕುಳಿತು ದಾಖಲೆ ತಯಾರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5** ನೇ ಆರೋಪಿ ಪರ ವಕೀಲರು, ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿದ್ದಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ